ಫ್ಯಾಕ್ಸ್ : 080 – 2202 8041

ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ಸಂಖ್ಯೆ : ವಾಇ : ಉ ನಿ : ಸುಮಪ : 2015–16 :

ಜುಲೈ 27, 2015

# ಮಾಜಿ ರಾಷ್ಟ್ರಪತಿ ಡಾ ಎ ಪಿ ಜೆ ಅಬ್ದುಲ್ ಕಲಾಂ ನಿಧನಕ್ಕೆ ಮುಖ್ಯಮಂತ್ರಿ ದಿಗ್ಭ್ರಮೆ

**ಬೆಂಗಳೂರು, ಜುಲೈ 27 :**

*ವಿಜ್ಞಾನ ಲೋಕದ ಧ್ರುವತಾರೆ* ಮಾಜಿ ರಾಷ್ಟ್ರಪತಿ ಡಾ ಎ ಪಿ ಜೆ ಅಬ್ದುಲ್ ಕಲಾಂ ಅವರ ನಿಧನಕ್ಕೆ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ದಿಗ್ಭ್ರಮೆ ವ್ಯಕ್ತಪಡಿಸಿದ್ದಾರೆ

*ಮಕ್ಕಳಿಗೆ ಪ್ರೀತಿಯ ಕಾರಂಜಿಯಾಗಿ, ಯುವಕರಿಗೆ ಅನುಕರಿಸಬಹುದಾದ ಜ್ಞಾನ ಪರ್ವತವಾಗಿದ್ದ* ಡಾ ಎ ಪಿ ಜೆ ಅಬ್ದುಲ್ ಕಲಾಂ ಅವರು *ಜನಸಾಮಾನ್ಯರ ರಾಷ್ಟ್ರಪತಿ* ಎಂದೇ ಜನಜನಿತರಾಗಿದ್ದರು. ಕೇವಲ ಭಾರತದಲ್ಲಿ ಮಾತ್ರವಲ್ಲದೆ, ಇಡೀ ವಿಶ್ವದಲ್ಲೇ ಎಲ್ಲರ ಪ್ರೀತಿ, ವಿಶ್ವಾಸ ಹಾಗೂ ಗೌರವಕ್ಕೆ ಪಾತ್ರರಾಗಿದ್ದರು.

ಸಿಟ್ಜರ್‌ಲ್ಯಾಂಡ್‌ಗೆ ಪ್ರಪ್ರಥಮ ಬಾರಿಗೆ ಡಾ ಕಲಾಂ ಅವರು ಭೇಟಿ ಇತ್ತಾಗ, ಭೇಟಿಯ ಗೌರವಾರ್ಥ ಮೇ 26 ರಂದು ವಿಜ್ಞಾನ ದಿನಾಚರಣೆ ಎಂದು ಆಚರಿಸುತ್ತಿದೆ ಎಂದರೆ ಇದು ಅವರ ಜನಪ್ರಿಯತೆಗೆ ಸಾಕ್ಷಿ.

ಭಾರತವು 2020 ಕ್ಕೆ ಬಲಿಷ್ಠ ರಾಷ್ಟ್ರವಾಗಲಿದೆ ಎಂದು ಅಪಾರ ಕನಸು ಕಂಡಿದ್ದ ಡಾ ಎ ಪಿ ಜೆ ಅಬ್ದುಲ್ ಕಲಾಂ ಅವರ ಹಠಾತ್ ನಿಧನವು ಪ್ರತಿಯೊಬ್ಬ ಭಾರತೀಯನನ್ನೂ ಶೋಕ ಸಾಗರಕ್ಕೆ ದೂಡಿದೆ ಎಂದು ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

***********

ಡಿ ಪಿ ಎಂ